ಶ್ರೀ ವಾಟಾಳ್ ನಾಗರಾಜ್ :- ಅತ್ತಿಗೊಂದು ಕಾಲ, ಸೊಸೆಗೊಂದು ಕಾಲ ಬರುತ್ತದೆ.

ಶ್ರೀ ಬಿ. ಮುನಿಯಪ್ಪ :- ನಾವು ವರದಕ್ಷಿಣೆ ಪ್ರಕರಣದ ಸಾವಿನ ವಿಚಾರದಲ್ಲಿ ಕೇಳಿರುವಂತೆ ಸ್ಟೌವ್ ಸೊಸೆ ಮೇಲೆಯೇ ಮಾತ್ರ ಸಿಡಿದು ಆಕೆ ಸಾವಿಗೀಡಾಗುತ್ತಾಳೆ. ಅತ್ತೆಯ ಮೇಲೆ ಸ್ಟೌವ್ ಸಿಡಿಯುವುದಿಲ್ಲ! ಇದರ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇದೆಯೇ?

ಶ್ರೀ ಆರ್. ರೋಷನ್ ಬೇಗ್ :- ವರದಕ್ಷಿಣೆ ಎನ್ನುವುದು ಹಳೆಯ ಕಾಲದ ಒಂದು ಪದ್ಧತಿಯಾಗಿದೆ. ಇದೊಂದು ಸಾಮಾಜಿಕ ಪಿಡುಗಾಗಿರುವುದರಿಂದ ಮಹಿಳೆಯರ ಸಮಸ್ಯೆಗಳನ್ನು ವಿಶೇಷವಾಗಿ ಆದ್ಯತೆ ಮೇರೆಗೆ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಲು ಈಗಾಗಲೇ ನಮ್ಮ ಸರ್ಕಾರವು 5 ಸರ್ವ ಮಹಿಳಾ ಪೋಲೀಸ್ ಠಾಣೆಗಳನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾ ಗಳಲ್ಲಿ ಸ್ಥಾಪಿಸಿದ್ದು, ಇನ್ನೂ ಹದಿನೇಳು ಸರ್ವ ಮಹಿಳಾ ಪೋಲೀಸ್ ಠಾಣೆಗಳನ್ನು ರಾಜ್ಯಾದ್ಯಂತ ಪ್ರಾರಂಭಿಸುತ್ತಿದ್ದೇವೆ. ಇದಲ್ಲದೆ ಬೆಂಗಳೂರು ನಗರ ಪೋಲೀಸ್ ಕಮಿಷನರ್‌ರವರ ಕಛೇರಿಯಲ್ಲಿ ಮಹಿಳೆಯರ ಸಲುವಾಗಿ ಕೌನ್ಸಲಿಂಗ್ ಸೆಂಟರ್ ಪ್ರಾರಂಭಿಸಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ನೇಮಕವಾಗಿರುವ ಸರ್ಕಾರೇತರ ಸಂಸ್ಥೆಯ ಏಳು ಜನ ಮಹಿಳಾ ಕೌನ್ಸಲಿಂಗ್‌ಗಳು ಪ್ರತಿ ದಿವಸ ಸದರಿ ಕೇಂದ್ರಕ್ಕೆ ಭೇಟಿ ಕೊಟ್ಟು ವರದಕ್ಷಿಣೆ ಇತ್ಯಾದಿ ಕೌಟುಂಬಿಕ ಸಮಸ್ಯೆಗಳಿಂದ ಬಳಲುತ್ತಿರುವ ಮಹಿಳೆಯರಿಗೆ ಸೂಕ್ತ ಪರಿಹಾರ ಕೊಡಲು ಪ್ರಯತ್ನಿಸಲಾಗುತ್ತಿದೆ. ಇದೇ ರೀತಿಯ ಕೇಂದ್ರಗಳನ್ನು ಇನ್ನಿತರ ಕೆಲವು ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದೇವೆ. ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ಕೌನ್ಸಲಿಂಗ್ ಸೆಂಟರ್‌ಅನ್ನು ತೆರೆಯುವ ಉದ್ದೇಶವಿದೆ.

ವಿಷಯ :- ಬೆಂಗಳೂರಿನ ಕೆಂಪಾಂಬುದಿ ಕೆರೆ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 245 (781)

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಕೆಂಪೇಗೌಡ ನಗರ, ಬಸವನಗುಡಿ ಕ್ಷೇತ್ರದಲ್ಲಿನ ಕೆಂಪಾಂಬುದಿ ಕೆರೆ ಅಭಿವೃದ್ಧಿಗೊಳಿಸಲು ಏನಾದರೂ ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಯಾವ ವರ್ಷದಲ್ಲಿ ಅಂದಾಜು ವೆಚ್ಚ ತಯಾರಿಸಲಾಗಿತ್ತು ಮತ್ತು? ಅಂದಾಜು ವೆಚ್ಚ, ಮಂಜೂರಾಗಿದ್ದಲ್ಲಿ ವಿವರ?

ಇ) ಅಭಿವೃದ್ಧಿ ಕಾಮಗಾರಿ ಯಾವುದಾದರು ಪ್ರಗತಿಯಲ್ಲಿದೆಯೇ? ಹಾಗಿದ್ದಲ್ಲಿ ಯಾವ ವರ್ಷದಿಂದ?

ಈ) ಈ ಅಭಿವೃದ್ಧಿ ಕಾರ್ಯಕ್ಕೆ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು? ಹಾಗಿದ್ದಲ್ಲಿ ಈ ಕಾರ್ಯ ಮುಕ್ತಾಯ ಹಂತ ತಲುಪುವುದೇ ಹಾಗಿದ್ದಲ್ಲಿ ಎಂದು?

ಉ) ಕಾಮಗಾರಿ ಕೈಗೆತ್ತಿಕೊಳ್ಳುವಲ್ಲಿ ಕಾಲ ವಿಳಂಬವಾಗಿ ಅಂದಾಜು ವೆಚ್ಚ ಪರಿಷ್ಕರಣೆಗೊಂಡಿದೆಯೇ? ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಅನಂತ್ ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :-

ಅ) ಹೌದು.

ಆ) 1995 ನೇ ಸಾಲಿನಲ್ಲಿ ಮಳೆ ನೀರಿನ ಮಾರ್ಗಪಲ್ಲಟನೆಗಾಗಿ 150-00 ಲಕ್ಷ ರೂ.ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿತ್ತು ಎತನಧ್ಯೆ ಮೆಗಾಸಿಟಿ ಯೋಜನೆಯಡಿಯಲ್ಲಿ ಇದನ್ನು ಸೇರಿಸಿ ಉದ್ಯಾನವನವನ್ನಾಗಿ ಅಭಿವೃದ್ಧಿಗೊಳಿಸಲು ಸಮಲೋಚಕರಾದ ಮೆ : ಒ.ಆರ್.ಜಿ. ತಂಡದವರು ಶಕ್ಯ ವರದಿಯನ್ನು ತಯಾರಿಸಿದರು ಸಮಲೋಚಕರು ನಿಗದಿ ಮಾಡಿದ ಪ್ರಕಾರ ಈ ಕೆರೆಯ ಅಭಿವೃದ್ಧಿಯ ಅಂದಾಜುವೆಚ್ಚ ಸುಮಾರು 65.11 ಲಕ್ಷಗಳಾಗಿದೆ. ಆದಾಗ್ಯೂ ಈ ಕೆರೆಯನ್ನು ನೀರಿನ ಕೊಳವನ್ನಾಗಿ ಅಥವಾ ಉದ್ಯಾನವನವನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಇ) ಕೆಲಸ ಪ್ರಾರಂಭವಾಗಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೇ, ಮೆಗಾಸಿಟಿ ಯೋಜನೆ ಬಂದನಂತರ ಕೆಂಪಾಂಬುದಿ ಕೆರೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಅರವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರಬೇಕು. ಆದರೆ, ಸಚಿವರು ತಮ್ಮ ಉತ್ತರದಲ್ಲಿ ಸದರಿ ಕೆರೆಯನ್ನು ನೀರಿನ ಕೊಳವನ್ನಾಗಿ ಅಥವಾ ಉದ್ಯಾನವನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಎಂದು ತಿಳಿಸಿದ್ದಾರೆ. ಇದರ ಬಗ್ಗೆ ಪರಿಶೀಲಿಸುವಂಥಾದ್ದೇನೂ ಇಲ್ಲ. Except sewerage water, you cannot bring any other water to that tank. If your intention is to clean the water and convert it into a tank, it will become a breeding centre for the mosquitoes. ಇದನ್ನು ಕೈ ಬಿಟ್ಟು ಅದನ್ನು ಉದ್ಯಾನವನವನ್ನಾಗಿ ಮಾಡಬೇಕು. ಈಗಾಗಲೇ ಕೆಲಸ ಕೈಗೆತ್ತಿ ಕೊಂಡಿದ್ದರೆ ಅರ್ಧ ಕೆಲಸವಾಗಿರುತ್ತಿತ್ತು, ಕೆಲಸ ಕೈಗೆತ್ತಿಕೊಳ್ಳಲು ಏನು ನೆಪ ಹೇಳುತ್ತಿದ್ದಾರೋ ಗೊತ್ತಿಲ್ಲ. ಕೆಂಪಾಂಬುದಿ ಕೆರೆಯನ್ನು ನೀರಿನ ಕೊಳವನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಏನು ತಿಳಿಸಿದ್ದೀರಿ, ಇದು ಸಾಧ್ಯವಾಗದ ಕೆಲಸವಾದ್ದರಿಂದ ಅದನ್ನು ಉದ್ಯಾನವನವನ್ನಾಗಿ ಮಾಡುತ್ತೇವೆಂದರೆ ನನ್ನದೇನೂ ಪ್ರಶ್ನೆಯಿಲ್ಲ.

ಶ್ರೀ ಆನಂತ್ ನಾಗ್ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಕೊಟ್ಟಿರುವ ಸಲಹೆಯಂತೆ ಕೆಲಸ ಹಮ್ಮಿಕೊಳ್ಳುತ್ತೇವೆ. ಅಲ್ಲಿ ತಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲು ಹಣಕಾಸಿನ ತೊಂದರೆಯಿರುವುದಲ್ಲದೆ ಕೆಂಪಾಂಬುದಿ ಕೆರೆಯ ಸುತ್ತಮುತ್ತಲಿರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಬೇರೆಡೆಗೆ ಸ್ಥಳಾಂತರಿಸಬೇಕಾಗಿರುವುದರಿಂದ ಈಗಾಗಲೇ ಅದನ್ನು ಉದ್ಯಾನವನವನ್ನಾಗಿ ಮಾರ್ಪಡಿಸ ಬೇಕೆಂಬ ಉದ್ದೇಶವಿದ್ದು, ಈ ವಿಚಾರವಾಗಿ ನಾನು ಸಂಬಂಧಿಸಿದವರೊಂದಿಗೆ ವೈಯಕ್ತಿಕವಾಗಿ ಚರ್ಚಿಸಿದ್ದು ಆದಷ್ಟು ಬೇಗ ಯೋಜನೆ ಜಾರಿಗೆ ತರುತ್ತೇವೆ.

ವಿಷಯ :- ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಹಸಿರು ಕಾರ್ಡ್ ಪಡೆದವರ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 247 (1640)

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಚುನಾವಣೆ ಕ್ಷೇತ್ರದಲ್ಲಿ ಹಸಿರುಕಾರ್ಡು ಪಡೆದಿರುವ ಜನಸಂಖ್ಯೆ ಎಷ್ಟು ?

ಆ) ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಜನರ ಸಂಖ್ಯೆ ಎಷ್ಟು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ತ್ರಿವರ್ಣ ಪಡಿತರ ಚೀಟಿಗಳನ್ನು ಹಸಿರು ಪಡಿತರ ಚೀಟಿಗಳಿಗಾಗಿ ಬದಲಾಯಿಸಿರುವುದು 19,657

ಹಸಿರು ಕಾರ್ಡು ನೀಡಿದ ಹೊಸ ಫಲಾನುಭವಿಗಳ ಸಂಖ್ಯೆ 7,261

ಹಸಿರು ಕಾರ್ಡು ಇನ್ನೂ ನೀಡಬೇಕಾದ ಹೊಸ ಫಲಾನುಭವಿಗಳ ಸಂಖ್ಯೆ 195

ಒಟ್ಟು 27,113

ಆ) ಪರಿಶಿಷ್ಟ ಜಾತಿ 5302

ಪರಿಶಿಷ್ಟ ಪಂಗಡ 2592